SMT. MUKTHARUNNISA.— They are unauthorised constructions, I agree But when those houses were constructed, what were your Corporation Officers doing ? Your Corporation was there, your revenue people were there and what were they doing ? What action you have taken against those officials ?

SRI A. LAKSHMISAGAR.— Sir, action have been taken.

ಶ್ರೀ ವೇದಾಂತ ಹೆಬ್ಬಿಗೆ.— ಕಾಂಗ್ರೆಸ್ ಸರ್ಕಾರ ಇದ್ದಾಗ ಬಂದಂತಹ ಅನಧಿಕೃತ ಕಟ್ಟಡಗಳನ್ನು ರೆಗ್ಯುಲರೈಸ್ ಮಾಡುತ್ತೀರಾ ? ಜನತಾ ಸರ್ಕಾರ ಬಂದ ಮೇಲೆ ಬಂದಂತಹ ಅನಧಿಕೃತ ಕಟ್ಟಡಗಳನ್ನು ಕೂಡಾ ರೆಗ್ಯುಲರೈಸ್ ಮಾಡುತ್ತೀರಾ ? ಯಾವುದನ್ನು ಮಾಡುತ್ತೀರಿ ?

SRI A. LAKSHMISAGAR—Sir, the matter is under the consideration of the Government.

ಮಧ್ಯಮ ಮತ್ತು ಬೃಹತ್ ಕೈಗಾರಿಕೆಗಳನ್ನು ಹರಿಹರ ತಾಲ್ಲೂಕಿನಲ್ಲಿ ಪ್ರಾರಂಭಿಸಿರುವ ಬಗ್ಗೆ

೩೮೭. ಶ್ರೀ ಬಿ. ಜಿ. ಕೊಟ್ರಪ್ಪ (ಹರಿಹರ).— ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹರಿಹರ ತಾಲ್ಲೂಕಿನಲ್ಲಿ ದೊಡ್ಡ ಕೈಗಾರಿಕಾ ಘಟಕವನ್ನು ಪ್ರಾರಂಭಿಸಲು ಸರ್ಕಾರದವರು ಕ್ರಮಕೈಕೊಳ್ಳುವರೇ ?

ಶ್ರೀ ಜೆ. ಹೆಚ್. ಪಟೇಲ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು).—

ಅ) ಸಧ್ಯಕ್ಕೆ ಸರ್ಕಾರದ ಮುಂದೆ ಯಾವ ತರಹದ ಪ್ರಸ್ತಾಪವೂ ಇರುವುದಿಲ್ಲ.

ಶ್ರೀ ಬಿ. ಜಿ. ಕೊಟ್ರಪ್ಪ,—ಹರಿಹರ ಪಟ್ಟಣದ ಹತ್ತಿರ ನೀರಿನ ಅನುಕೂಲ ಇದ್ದು, ಪಾಲಿಫೈಬರ್ ನವರು ಹೆಚ್ಚಿಗೆ ಲಾಭ ಮಾಡಿದ್ದಾರೆ, ಬೇರೆ ಕಡೆಯಿಂದ ಬಂದಂತಹವರು ಲಾಭ ಮಾಡುತ್ತಿದ್ದಾರೆ, ಅಂತಹ ಅನುಕೂಲ ಅಲ್ಲಿದೆ ಅಂತಹ ಜಾಗದಲ್ಲಿ ಸರ್ಕಾರದವರು ಇದುವರೆವಿಗೂ ಯಾವ ಕಾರ್ಖಾನೆಯನ್ನೂ ಮಾಡಿಲ್ಲ. ಆ ರೀತಿ ಕಾರ್ಖಾನೆಯನ್ನು ಮಾಡಿದರೆ, ನಮ್ಮ ಜನರಿಗೆ ನೌಕರಿ ಸಿಕ್ಕುತ್ತದೆ, ಆ ಉದ್ದೇಶದಿಂದ ದಾವಣಗೆರೆ ಹಾಗೂ ಹರಿಹರ ಪಟ್ಟಣಗಳ ನಡುವೆ ಒಂದು ದೊಡ್ಡ ಕಾರ್ಖಾನೆಯನ್ನು ಸರ್ಕಾರದ ವತಿಯಿಂದಲೇ ಮಾಡುವುದಕ್ಕೆ ಯೋಜನೆಯನ್ನು ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಸದಸ್ಯರ ಕಳಕಳಿಯನ್ನು ನಾನು ಅರ್ಥಮಾಡಿಕೊಂಡಿದ್ದೇನೆ ಈಗಾಗಲೇ ಹರಿಹರ ಪಟ್ಟಣದ ಸುತ್ತ ಮುತ್ತ ೪೫ ದೊಡ್ಡ ಕಾರ್ಖಾನೆಗಳು ಬಂದಿವೆ. ಹರಿಹರ ದಾವಣಗೆರೆ ಪಟ್ಟಣಗಳ ನಡುವೆ ಕಾರ್ಖಾನೆಯೊಂದನ್ನು ಸರ್ಕಾರದ ವತಿಯಿಂದ ಪ್ರಾರಂಭ ಮಾಡಬೇಕೆಂದು ಮಾನ್ಯ ಸದಸ್ಯರು ಸಲಹೆ ನೀಡಿದ್ದಾರೆ. ಈಗ ಸಧ್ಯಕ್ಕೆ ಆ ಯೋಜನೆ ಇಲ್ಲ. ಆದರೆ ಯಾರಾದರೂ ಖಾಸಗಿಯವರು ಅಲ್ಲಿನ ಮಾಲಿನ್ಯತೆಗೆ ಧಕ್ಕೆ ಬಾರದ ರೀತಿಯಲ್ಲಿ ತೆಚ್ಚು ವಿದ್ಯುಚ್ಛಕ್ತಿಯನ್ನು ಅವಲಂಬಿಸದೆ ಜನರಿಗೆ ಕೆಲಸವನ್ನು ಕೊಡತಕ್ಕಂತಹ ಲೇಬರ್ ಓರಿಯಂಟೆಡ್ ಕೈಗಾರಿಕೆಯನ್ನು ಮಾಡಿಂತ್ತೇವೆಂದು ಮುಂದೆ ಬಂದರೆ ಸರ್ಕಾರ ಅವರಿಗೆ ಪ್ರೋತ್ಸಾಪ ನೀಡುತ್ತದೆ.

ಲೋಕ ಸೇವಾ ಆಯೋಗ ಹಾಗೂ ಉದ್ಯೋಗ ವಿನಿಮಯ ಕೇಂದ್ರಗಳ ಪಾತ್ರ

೭೪೧. ಶ್ರೀ ಐ. ಬಿ. ಶಂಕರ್ (ಚಿಕ್ಕಮಗಳೂರು).—ಮಾನ್ಯ ಕಾರ್ಮಿಕ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಲೋಕಸೇವಾ ಆಯೋಗವು ಉದ್ಯೋಗ ನೀಡುವುದರಲ್ಲಿ ಪ್ರಾಮುಖ್ಯತೆ ಪಡೆದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಜಿಲ್ಲೆಯ ಉದ್ಯೋಗ ವಿನಿಮಯ ಕೇಂದ್ರಗಳ ಕೆಲಸ ಕಾರ್ಯಗಳ ನಿರ್ವಹಣೆ ಏನು?